**ಪ್ರ.ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ.**

**(ಸಂಚಾರಿ ನ್ಯಾಯಾಲಯ ಅಜ್ಜಂಪುರ)**

**ಸಿ.ಸಿ .ಸಂಖ್ಯೆ ::616/2023**

**ಸಾಕ್ಷಿದಾರರ ಹೆಸರು** : ಬಿ ಎಸ್ ವಿಜಯ **DW-1**

**ಗಂಡನ ಹೆಸರು** : ವೇದಮೂರ್ತಿ

**ವಯಸ್ಸು** : 50 ವರ್ಷ

**ಉದ್ಯೋಗ** : ಗೃಹಿಣಿ

**ವಾಸಸ್ಥಳ** : ಶಾನಗೋಗನಹಳ್ಳಿ

**ದಿನಾಂಕಃ28-01-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಆರೋಪಿಯ ಪರ ಶ್ರೀ.TGU ವಕೀಲರಿಂದ ::**

ಪಿರ್ಯಾದುದಾರರ ಪರಿಚಯ ನನಗೆ ಇರುವುದಿಲ್ಲ. ಆದ್ದರಿಂದ ನಾನು ಪಿರ್ಯಾದುದಾರರಿಂದ ಯಾವುದೇ ಸಾಲವನ್ನು ಪಡೆಯಲು ಸಾಧ್ಯ ಇರುವುದಿಲ್ಲ. ನಮ್ಮ ಗ್ರಾಮದ ರವಿಶಂಕರ್ ಎನ್ನುವವರ ಜೊತೆ ನಮ್ಮ ಕುಟುಂಬಕ್ಕೆ ದ್ವೇಷ ಇದ್ದು, ಇದಕ್ಕೆ ಸಂಬಂಧಪಟ್ಟಂತೆ ಆತನು ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಅರುಣ ಎನ್ನುವ ಹುಡುಗನ ಮುಖಾಂತರ ನಮ್ಮ ಮನೆಯಲ್ಲಿ ಇಟ್ಟಿದ್ದ ಸಹಿ ಮಾಡಿದ 1 ಚೆಕ್ ಬುಕ್ ಅನ್ನು 2023 ನೇ ಸಾಲಿನಲ್ಲಿ ಕಳ್ಳತನ ಮಾಡಿಕೊಂಡು ಹೋಗಿ ಅದನ್ನು ರವಿಶಂಕರ್ ರವರಿಗೆ ನೀಡಿರುತ್ತಾನೆ ಸದರಿ ರವಿಶಂಕರ್ ರವರು ಅದರಲ್ಲಿ ಒಂದು ಚೆಕ್ ಅನ್ನು ಪಿರ್ಯಾದುದಾರರಿಗೆ ನೀಡಿ, ಪಿರ್ಯಾದುದಾರರು ಮತ್ತು ರವಿಶಂಕರ್ ರವರು ಸದರಿ ಚೆಕ್ ಅನ್ನು ತುಂಬಿಸಿ ಸಹಿ ಮಾಡಿ ಸುಳ್ಳಾಗಿ ಬ್ಯಾಂಕ್ ಗೆ ಹಾಜರುಪಡಿಸಿರುತ್ತಾರೆ.

ಸದರಿ ರವಿಶಂಕರ್ ಇದನ್ನು ಹೊರತುಪಡಿಸಿ 2023 ನೇ ಸಾಲಿನಲ್ಲಿ ನನಗೆ ಹಾಗೂ ನನ್ನ ಮಗನಿಗೆ 10 ಲಕ್ಷ ರೂಪಾಯಿ ಹಣ ನೀಡಬೇಕೆಂದು ತೊಂದರೆ ನೀಡಿರುತ್ತಾನೆ. ನನ್ನ ಚೆಕ್ ಬುಕ್ ಕಳ್ಳತನವಾಗಿರುವ ವಿಚಾರ ಈ ಪ್ರಕರಣದ ನೋಟೀಸ್ ನನಗೆ ತಲುಪಿದಾಗ

ನನಗೆ ತಿಳಿದು ಬಂದಿರುತ್ತದೆ. ಆ ರೀತಿ ನೋಟೀಸ್ ಬಂದ ನಂತರ ಆಗಿರುವ ವಿಚಾರದ ಬಗ್ಗೆ ನಾನು ಅಜ್ಜಂಪುರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಲು ಪ್ರಯತ್ನಿಸಿದಾಗ ಸದರಿ ರವಿಶಂಕರ್ ಪ್ರಭಾವಿ ವ್ಯಕ್ತಿಯಾದ ಕಾರಣ ಪೊಲೀಸರು ದೂರನ್ನು ಸ್ವೀಕರಿಸಿರುವುದಿಲ್ಲ, ಆದಕಾರಣ ನಾನು ಎಸ್ ಪಿ ರವರಿಗೆ ದಿಃ 23.03.2023 ರಂದು ಒಂದು ಲಿಖಿತ ದೂರನ್ನು ರವಿಶಂಕರ್, ಅರುಣ, ಪಿರ್ಯಾದುದಾರರ ವಿರುದ್ದ ನೀಡಿರುತ್ತೇನೆ. ಎಸ್ ಪಿ ಕಚೇರಿಯಲ್ಲಿ ನಾನು ನೀಡಿರುವ ದೂರಿನ ಬಗ್ಗೆ ತನಿಖೆ ನಡೆಸುವುದಾಗಿ ಭರವಸೆ ನೀಡಿದ್ದರೂ ಪೊಲೀಸರು ಯಾವುದೇ ತನಿಖೆ ಇವರೆಗೂ ಮಾಡಿರುವುದಿಲ್ಲ. ಸಾಕ್ಷಿಯು ಎಸ್ ಪಿ ರವರಿಗೆ ನೀಡಿದ ದೂರನ್ನು ಹಾಜರುಪಡಿಸಿದ್ದು ಅದನ್ನು ನಿಡಿ1 ಎಂದು ಗುರುತಿಸಲಾಯಿತು.

ಈ ವಿಚಾರಗಳು ನಮ್ಮ ಗ್ರಾಮಸ್ಥರಿಗೆ ತಿಳಿದು ಬಂದ ಮೇರೆಗೆ ಅವರು ಸದರಿ ರವಿಶಂಕರ್ ರವರನ್ನು ಕರೆದು ನನಗೆ ಮುಂದೆ ತೊಂದರೆ ನೀಡಬಾರದೆಂದು ಸಹ ಎಚ್ಚರಿಕೆ ನೀಡಿರುತ್ತಾರೆ. ನನಗೆ ಹಾಗೂ ಪಿರ್ಯಾದುದಾರರಿಗೆ ಯಾವುದೇ ಪರಿಚಯ ಇಲ್ಲದ ಕಾರಣ ಹಾಗೂ ನಾನು ಮೇಲೆ ಹೇಳಿದಂತೆ ನನ್ನ ಚೆಕ್ ದುರುಪಯೋಗ ಆಗಿರುವ ಕಾರಣ ನನ್ನ ವಿರುದ್ಧ ಹೂಡಿರುವ ಪಿರ್ಯಾದಿಯನ್ನು ವಜಾ ಮಾಡಬೇಕಾಗಿ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ.

**:: ಪಾಟೀ ಸವಾಲು :: ಪಿರ್ಯಾದುದಾರರ ಪರ ವಕೀಲರಿಂದ ::**

**(ಪಾಟೀ ಸವಾಲಿಗೆ ಪಿರ್ಯಾದುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: